## 78ನೇ ರಾಷ್ಟ್ರೀಯ ವಿದ್ಯಾರ್ಥಿ ದಿನ ಆಚರಣೆ




**ಕೂಡ್ಲಿಗಿ:** ಪಟ್ಟಣದ ಹಿರೇಮಠ ವಿದ್ಯಾಪೀಠ ಸಂಯುಕ್ತ ಪದವಿ ಪೂರ್ವ ಕಾಲೇಜಿನಲ್ಲಿ ನಡೆದ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ (ಎಬಿವಿಪಿ) ಕೂಡ್ಲಿಗಿ ಘಟಕದಿಂದ 78ನೇ ರಾಷ್ಟ್ರೀಯ ವಿದ್ಯಾರ್ಥಿ ದಿನ ಆಚರಿಸಲಾಯಿತು. ಭಾರತ ಮಾತೆ ಹಾಗೂ ಸ್ವಾಮಿ ವಿವೇಕಾನಂದರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸುವ ಮೂಲಕ ಕಾರ್ಯಕ್ರಮ ಉದ್ಘಾಟಿಸಲಾಯಿತು. ಬಳಿಕ ವಿದ್ಯಾರ್ಥಿ ಜೀವನದಲ್ಲಿ ರಾಷ್ಟ್ರಭಕ್ತಿ, ಸಂಸ್ಕಾರ, ನಾಯಕತ್ವ, ಸಾಮಾಜಿಕ ಹೊಣೆಗಾರಿಕೆ ಹಾಗೂ ವ್ಯಕ್ತಿತ್ವ ವಿಕಾಸದ ಮಹತ್ವದ ಕುರಿತು ಉಪನ್ಯಾಸನಡೆಯಿತು.

ಎಬಿವಿಪಿ ಜಿಲ್ಲಾ ಸಂಚಾಲಕ ಧನುಷ್ ಕುಮಾರ್ ಮಾತನಾಡಿ, ವಿದ್ಯಾರ್ಥಿಗಳು ಕೇವಲ ಉತ್ತಮ ಅಂಕಗಳನ್ನು ಗಳಿಸುವುದಕ್ಕಷ್ಟೇ ಸೀಮಿತವಾಗದೆ, ಉತ್ತಮ ವ್ಯಕ್ತಿತ್ವ, ಸಮಾಜಮುಖಿ ಚಿಂತನೆ, ನೈತಿಕ ಮೌಲ್ಯಗಳು ಹಾಗೂ ರಾಷ್ಟ್ರ ಸೇವೆಯ ಮನೋಭಾವ ಬೆಳೆಸಿಕೊಳ್ಳಬೇಕು ಎಂದು ಕರೆ ನೀಡಿದರು.

ಎಚ್.ಎಂ.ಯು ಕಾಲೇಜಿನ ಪ್ರಾಂಶುಪಾಲರು ಸಿದ್ದರಾಮ ಹಿರೇಮಠ, ತಾಲೂಕ ಸಂಚಾಲಕ ಪಿ ಎರಿಸ್ವಾಮಿ ನಗರ ಕಾರ್ಯದರ್ಶಿ ಜಿ ಶರತ್ ಕುಮಾರ್, ರಾಜ್ಯ ಕಾರ್ಯಕರಣಿ ಸದಸ್ಯರಾದ ರಮೇಶ್, ಎಸ್‌ಎಫ್‌ಎಸ್ ರಾಜ್ಯ ಸಹ ಸಂಚಾಲಕ ಕೆ ಕೃಷ್ಣ ಸೇರಿದಂತೆ ಕಾಲೇಜಿನ ಉಪನ್ಯಾಸಕರು, ವಿದ್ಯಾರ್ಥಿಗಳು, ಎಬಿವಿಪಿಯ ಪದಾಧಿಕಾರಿಗಳು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

## ನಿವೃತ್ತಿ ಶಿಕ್ಷಕ, ಕೆಡಿಪಿ ಸದಸ್ಯ ಎಚ್. ಗವಿಯಪ್ಪ ನಿಧನ



**ಕೂಡ್ಲಿಗಿ:** ಅವರು ಕೆಲವು ದಿನಗಳ ಕಾಲ ಅನಾರೋಗ್ಯದ ಸಮಸ್ಯೆಯಿಂದ ಬಳಲುತ್ತಿದ್ದ ತಾಲೂಕಿನ ಗುಂಡುಮುಣುಗು ಗ್ರಾಮದ ನಿವೃತ್ತಿ ಶಿಕ್ಷಕರು, ಕೆಡಿಪಿ ಸದಸ್ಯ ಎಚ್. ಗವಿಯಪ್ಪ (74) ಶನಿವಾರ ರಾತ್ರಿ ನಿಧನರಾದರು.

ಮೃತರಿಗೆ ಪತ್ನಿ ಹೆಚ್. ಬಸಮ್ಮ, ಪುತ್ರ ಕಾಂಗ್ರೆಸ್ ಮುಖಂಡ ಮಂಜಣ್ಣ ಸೇರಿ ಮೂವರು ಜನ ಪುತ್ರರು, ಸೇರಿ ಸೊಸೆಯಂದಿರು, ಮೊಮ್ಮಕ್ಕಳು, ಅಪಾರ ಬಂಧುಗಳು ಇದ್ದಾರೆ. ಸ್ವಗ್ರಾಮ ಗುಂಡುಮುಣುಗು ಸ್ವಗೃಹದಲ್ಲಿ ಶನಿವಾರ ಸಂಜೆ ಅಂತ್ಯಕ್ರಿಯೆ ನೆರವೇರಿಸಲಾಯಿತು. ದಿ. ಎಚ್. ಗವಿಯಪ್ಪ ಅವರು ನಿವೃತ್ತಿ ಶಿಕ್ಷಕರು ಹಾಗೂ ಕೆಡಿಪಿ ಸದಸ್ಯರಾಗಿ ಸೇವೆ ಸಲ್ಲಿಸುತ್ತಿದ್ದರು. ಅವರ ನಿಧನಕ್ಕೆ ಶಾಸಕ ಡಾ.ಎನ್.ಟಿ.ಶ್ರೀನಿವಾಸ್, ಮಾಜಿ ಶಾಸಕ ದಿ. ಎನ್. ಟಿ. ಬೊಮ್ಮಣ್ಣನವರ ಧರ್ಮಪತ್ನಿ ಓಬಮ್ಮ ಹಾಗೂ ತಮ್ಮಣ್ಣ ಎನ್.ಟಿ ಹಾಗೂ ಅವರ ಕುಟುಂಬದವರು ದುಃಖದಲ್ಲಿ ಇರುವ ಕುಟುಂಬವನ್ನು ಭೇಟಿ ಮಾಡಿ, ಹಿರಿಯರ ದರ್ಶನ ಪಡೆದರು. ಅವರ ಆತ್ಮಕ್ಕೆ ಶಾಂತಿ ಕೋರಿದರು. ಹಾಗೆಯೇ, ಕುಟುಂಬಕ್ಕೆ ಸಾಂತ್ವನ ಹೇಳಿ, ಧೈರ್ಯವನ್ನು ತುಂಬಿದರು. ಗಣ್ಯರು, ಮುಖಂಡರು ಸಂತಾಪ ಸೂಚಿಸಿದ್ದಾರೆ.

### ಎಂ.ಪಿ. ಪ್ರಕಾಶ್ ಪುತ್ಥಳಿ ಅನಾವರಣ ಕಾರ್ಯಕ್ರಮದಲ್ಲಿ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅಭಿಪ್ರಾಯ

# ದಿ. ಎಂ.ಪಿ. ಪ್ರಕಾಶ್ ಸಜ್ಜನ, ಅಜಾತ ಶತೃ ರಾಜಕಾರಣಿ

**ಉದಯಕಾಲ ನ್ಯೂಸ್**

ಹೂವಿನಹಡಗಲಿ(ವಿಜಯನಗರ): ಎಂ.ಪಿ. ಪ್ರಕಾಶ್ ಒಮ್ಮೆ ಈ ರಾಜ್ಯದ ಮುಖ್ಯಮಂತ್ರಿಯಾಗಬೇಕಾಗಿತ್ತು. ಅವರು ಎಂದು ಜಾತಿವಾದಿಗಳಾಗಿರಲಿಲ್ಲ ಅವರು ಎಂದು ಮಠಾಧೀಶರ ದುರ್ಬಳಕೆ ಮಾಡಿಕೊಂಡವರಲ್ಲ ಅವರ ಅಗಲುವಿಕೆಯಿಂದ ರಾಜ್ಯಕ್ಕೆ ನಷ್ಟವಾಗಿದೆ. ನಾವು ಒಬ್ಬ ಸಜ್ಜನ, ಅಜಾತ ಶತೃವಾಗಿರುವ ರಾಜಕಾರಣಿ ಯನ್ನು ಕಳೆದುಕೊಂಡಿದ್ದೇವೆ ಎಂದು ರಾಜ್ಯದ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಹೇಳಿದರು.

ಪಟ್ಟಣದಲ್ಲಿ ಎಂ.ಪಿ.ಪ್ರಕಾಶ್ ಪ್ರತಿಷ್ಠಾನ ಹಾಗೂ ರಂಗಭಾರತಿಯಿಂದ ಹಮ್ಮಿಕೊಳ್ಳಲಾಗಿದ್ದ ಎಂ.ಪಿ. ಪ್ರಕಾಶ್ ಜನ್ಮದಿನ ನಿಮಿತ್ಯ ಅವರ ಪುತ್ಥಳಿ ಅನಾವರಣ ಕಾರ್ಯಕ್ರಮದಲ್ಲಿ ಪುತ್ಥಳಿ ಅನಾವರಣ ಮಾಡಿ ಮಾತನಾಡಿದರು.

ಸಮಾಜಮುಖಿ ಚಿಂತನೆಗಳನ್ನು ಮೈಗೂಡಿಸಿಕೊಂಡಿದ್ದ ಪ್ರಕಾಶ್ ರವರು ಅತ್ಯಂತ ಜಾಣ್ಮೆ ರಾಜಕಾರಣಿಯಾಗಿದ್ದರು. ರಾಜಕಾರಣದಲ್ಲಿ ಸಮಸ್ಯೆ ಉಂಟಾದಾಗಲೆಲ್ಲ ನಾವುಗಳು ಅವರಿಂದ ಪರಿಹಾರ ಕಂಡುಕೊಳ್ಳುತ್ತಿದ್ದೇವು. ನನಗೆ ಮಾರ್ಗದರ್ಶಕರಾಗಿದ್ದರು ಎಂದರೆ ತಪ್ಪಾಗಲಾರದು. ರಾಜಕಾರಣಿಗಳಲ್ಲಿ ಓದುವಿಕೆ ತುಂಬಾ ಕಡಿಮೆ ಇರುತ್ತದೆ. ಆದರೆ ಎಂ.ಪಿ.ಪ್ರಕಾಶ್ ಇದಕ್ಕೆ ಅಪವಾದವಾಗಿದ್ದರು. ಅವರು ಯಾವಾಗಲೂ ಓದಿನ ಹವ್ಯಾಸ ಇತ್ತು. ಯಾವಾಗಲೂ ಸಮಾಜದ ಒಳಿತಿನ ಬಗ್ಗೆ ಯೋಚನೆ ಹೊಂದಿದ್ದರು. ದೂರ ದೃಷ್ಟಿಯಿಂದ ರಾಜಕಾರಣ ಮಾಡುವವರಾಗಿದ್ದರು. ಇಂದು ರಾಜಕಾರಣದಲ್ಲಿ ಪ್ರಮಾಣಿಕತೆ ಇರಲು ಸಾಧ್ಯವಿಲ್ಲ ಎನ್ನುವಷ್ಟು ರಾಜಕಾರಣದ ಪರಿಸ್ಥಿತಿ ಯಾಗಿದೆ ಎಂದರು.



**ಹಡಗಲಿ ಇಂಜಿನಿಯರಿಂಗ್ ಕಾಲೇಜಿಗೆ ಹೆಸರು:** ಹಡಗಲಿ ಸರ್ಕಾರಿ ಇಂಜಿನಿಯರಿಂಗ್ ಕಾಲೇಜಿಗೆ ಎಂ.ಪಿ.ಪ್ರಕಾಶ್ ರವರ ಹೆಸರಿಡಬೇಕು ಎನ್ನುವ ಒತ್ತಾಸೆ ಕೇಳಿಯಾಗಿದೆ. ನಾನು ಸಹ ಈ ಕುರಿತು ಸರ್ಕಾರಕ್ಕೆ ಪತ್ರ ಬರೆಯುವುದಾಗಿ ತಿಳಿಸಿದರು.

ಖ್ಯಾತ ನಿರ್ದೇಶಕ ಟಿ.ಎನ್.ಸೀತಾರಾಮ್ ಮಾತನಾಡಿ ಪ್ರಕಾಶ್ ರವರ ರಾಜಕೀಯ ಜೀವನ ಒಂದು ವಿಶೇಷವಾಗಿದೆ.ಅವರಲ್ಲಿ ಒಂದು ಸಾಂಸ್ಕೃತಿಕ ಹೃದಯವಿತ್ತು.ಮನುಷ್ಯನಿಗೆ ಉತ್ತಮ ಸಂಸ್ಕೃತಿ ಮುಖ್ಯವಾಗಿದೆ ಎಂದರು. ಸಂಸದ ತುಕಾರಾಮ್ ಮಾತನಾಡಿ ಎಂಪಿ.ಪ್ರಕಾಶ್ ರವರ ರಾಜಕೀಯ ಹೋರಾಟಗಳನ್ನು ಅವರ ಜನಪರ ಕಾರ್ಯಗಳನ್ನು ನೆನಪಿಸಿದರು. ಕಾರ್ಯಕ್ರಮದಲ್ಲಿ ಮಾಜಿ ಸಚಿವರಾದ ಲೀಲಾದೇವಿ ಆರ್ ಪ್ರಸಾದ್, ಅಮರೇಗೌಡ ಬಯ್ಯಾಪುರ ಮಾತನಾಡಿದರು.

ಶಾಸಕ ಎಸ್ಎಸ್.ಪಾಟೀಲ್, ಅನ್ನಪೂರ್ಣ ಈ ತುಕಾರಾಮ್, ರಾಘವೇಂದ್ರ ಹಿಟ್ನಾಳ್, ಗಣೇಶ್ ಪ್ರಸಾದ್ ಮಾಜಿ ಶಾಸಕರಾದ ಬಿ.ಚಂದ್ರನಾಯ್ಕ. ನಾಟಕ ಅಕಾಡಮಿಯ ಅಧ್ಯಕ್ಷರಾದ ನಾಗರಾಜ್ ರಂಗಕರ್ಮಿ ಶ್ರೀನಿವಾಸ ಕಪ್ಪಣ್ಣ.ಎಂ.ಪಿ.ಪ್ರಕಾಶ್ ಪ್ರತಿಷ್ಠಾನದ ಕಾರ್ಯಾಧ್ಯಕ್ಷೆ ಸುಮಾ ವಿಜಯ್. ಮುರುಗೇಶ್ ತುರುಕಾಣಿ. ಮುಂತಾದವರು ಹಾಜರಿದ್ದರು.

ಕಾರ್ಯಕ್ರಮದ ಸಾನಿಧ್ಯವನ್ನು ಸುತ್ತೂರು ಸುಕ್ಷೇತ್ರದ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು ವಹಿಸಿದ್ದು. ನೇತೃತ್ವ ವನ್ನು ಲಿಂಗನಾಯ್ಕನಹಳ್ಳಿ ಜಂಗಮ ಕ್ಷೇತ್ರದ ಚನ್ನವೀರ ಶಿವಯೋಗಿಗಳು, ಹಡಗಲಿ ಗವಿಮಠದ ಶ್ರೀ ಗಳಾದ ಡಾ. ಹಿರಿಶಾಂತ ವೀರ ಮಹಾಸ್ವಾಮಿಗಳು, ಹಿರೇಮಲ್ಲನಕೇರಿ ಮಠದ ಶ್ರೀ ಗಳಾದ ಚನ್ನಬಸವ ಮಹಾಸ್ವಾಮಿಗಳು ವಹಿಸಿದ್ದರು. ಎಂ.ಪಿ.ಪ್ರಕಾಶ್ ಪ್ರತಿಷ್ಠಾನ ದ ಕಾರ್ಯದರ್ಶಿ ಪ್ರೋ ಶಾಂತಮೂರ್ತಿ ಬಿ ಕುಲಕರ್ಣಿ ಪ್ರಸ್ತಾವಿಕವಾಗಿ ಮಾತನಾಡಿದರು.

> ಎಂ.ಪಿ.ಪ್ರಕಾಶ್ ಹಾಗೂ ಸಿದ್ದರಾಮಯ್ಯನವರ ಆಡಳಿತದ ಅವಧಿಯಲ್ಲಿ ಕಟ್ಟಿದ ನಾಡು ದೇಶದಲ್ಲಿಯೇ ಪ್ರಸಿದ್ದವಾಗಿದೆ. ರಾಜ್ಯದಲ್ಲಿ ಸಿದ್ದರಾಮಯ್ಯನವರ ಸೇವೆಯನ್ನು ಯಾರು ಮರೆಯಲು ಸಾಧ್ಯವಿಲ್ಲ.
> ■ ಶಾಸಕ ಕೃಷ್ಣನಾಯ್ಕ
> ಶಾಸಕರು ಹೂವಿನಹಡಗಲಿ ವಿಧಾನಸಭಾ ಕ್ಷೇತ್ರ.

> ಅಭಿವೃದ್ದಿ ಹಾಗೂ ನಾಯಕತ್ವಕ್ಕೆ ಕ್ಷೇತ್ರದ ಜನತೆ ಸತತವಾಗಿ ಬೆಂಬಲಿಸದೇ ಇರುವುದು ಬೇಸರವಾಗಿದೆ.ರಂಗಭಾರತಿ ಕಟ್ಟಡ ಪೂರ್ಣಗೊಳ್ಳಲು ಸಿದ್ದರಾಮಯ್ಯನವರ ಆಡಳಿತದಲ್ಲಿ 1 ಕೋಟಿ ರೂಗಳ ಅನುದಾನ ಬಿಡುಗಡೆ ಮಾಡಲಾಗಿತ್ತು.
> ಪಿ.ಟಿ.ಪರಮೇಶ್ವರನಾಯ್ಕ.
> ■ ಮಾಜಿ ಶಾಸಕ, ಹೂವಿನಹಡಗಲಿ ವಿಧಾನಸಭಾ ಕ್ಷೇತ್ರ.

> ಹಡಗಲಿ ಸಾಂಸ್ಕೃತಿಕ ವಾಗಿ ಹೆಸರು ಮಾಡಿದೆ ಎಂದರೆ ಅದಕ್ಕೆ ಎಂ.ಪಿ.ಪ್ರಕಾಶ್ ರವರು ಕಾರಣ ಹಡಗಲಿ ಜನತೆ ಅದನ್ನು ಮುಂದುವರೆಸಿಕೊಂಡು ಹೋಗಬೇಕು.
> ■ ಲತಾಮಲ್ಲಿಕಾರ್ಜುನ.
> ಶಾಸಕಿ, ಹರಪನಹಳ್ಳಿ ವಿಧಾನಸಭಾ ಕ್ಷೇತ್ರ.

## ಕಡಿಮೆ ಅವಧಿಗೆ ಶೇ. 100 ಗಣತಿ ನಮೂನೆ ವಿತರಣೆ: ಬಿಎಲ್ಒಗೆ ಅಭಿನಂದನೆ



**ಉದಯಕಾಲ ನ್ಯೂಸ್**

**ವಿಜಯನಗರ(ಹೊಸಪೇಟೆ):** ವಿಶೇಷ ಮತದಾರ ಪಟ್ಟಿ ಪರಿಷ್ಕರಣೆ 2026ಕ್ಕೆ ಸಂಬಂಧಿಸಿದಂತೆ ಕಡಿಮೆ ಅವಧಿಯಲ್ಲಿ ಶೇಕಡಾ 100ರಷ್ಟು ಗಣತಿ ನಮೂನೆಗಳನ್ನು ಅರ್ಹ ಮತದಾರರಿಗೆ ವಿತರಣೆ ಮಾಡಿದ ಬಿಎಲ್ಒಗಳಿಗೆ ಶುಕ್ರವಾರ ನಗರದ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಜಿಲ್ಲಾಧಿಕಾರಿ ಕವಿತಾ ಎಸ್ ಮನ್ನಿಕೇರಿ ಪ್ರಶಂಸೆ ಮತ್ತು ಅಭಿನಂದನೆ ಪತ್ರ ನೀಡಿ ಪ್ರಶಂಸೆ ವ್ಯಕ್ತಪಡಿಸಿದರು.

ವಿಶೇಷ ತೀವ್ರ ಮತದಾರ ಪಟ್ಟಿ ಪರಿಷ್ಕರಣೆ 2026 ಕ್ಕೆ ಸಂಬಂಧಿಸಿದಂತೆ 90 ವಿಜಯನಗರ ವಿಧಾನಸಭಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಮತದಾರರ ಪಟ್ಟಿ ಪರಿಷ್ಕರಣಾ ಕಾರ್ಯದಲ್ಲಿ ಬೂತ್ ಮಟ್ಟದ ಅಧಿಕಾರಿಯಾಗಿ ಬಿ.ಎಲ್ .ಓ ಗಳಿಗೆ ವಹಿಸಲಾಗಿದ್ದ ಗಣತಿ ನಮೂನೆಗಳನ್ನು ಎಲ್ಲಾ ಅರ್ಹ ಮತದಾರರಿಗೆ ವಿತರಿಸುವುದು ಮತ್ತು ಮೊಬೈಲ್ ಆಪ್ ನಲ್ಲಿ ಎಲ್ಲಾ ಗಣತಿ ನಮೂನೆಗಳ ಡಿಜಟಲೀಕರಣ ಕಾರ್ಯವನ್ನು ಕೇವಲ 10 ದಿನಗಳಲ್ಲಿ ಪೂರ್ಣಗೊಳಿಸಿ ಚುನಾವಣಾ ಪ್ರಮುಖ ಕಾರ್ಯದಲ್ಲಿ ಅತ್ಯಂತ ಕಡಿಮೆ ಅವಧಿಯಲ್ಲಿ ಶೇಕಡಾ 100ರಷ್ಟು ಗಣತಿ ನಮೂನೆಗಳನ್ನು ಅರ್ಹ ಮತದಾರರಿಗೆ ವಿತರಣೆ ಮಾಡಿ ಅಗತ್ಯ ದತ್ತಾಂಶಗಳನ್ನು ಸಂಗ್ರಹಣೆ ಮಾಡಿ ಬಿ.ಎಲ್ .ಓ ಆಪ್ ನಲ್ಲಿ ಡಿಜಟಲೀಕರಣ ಮಾಡಿ ಯಶಸ್ವಿಯಾಗಿ ಮುಕ್ತಾಯಗೊಳಿಸಿದ ಪಾಪಿನಾಯಕನಹಳ್ಳಿ ಕಂದಾಯ ಗ್ರಾಮ ಮತಗಟ್ಟೆ ಅಧಿಕಾರಿಗಳ ಮೇಲ್ವಿಚಾರಕ ಗ್ರಾಮ ಆಡಳಿತಾಧಿಕಾರಿ ವಿನೋದ ಕುಂಬಾರ್, ಕುಂಟಗಲ್ಲಿ ಉರ್ದು ಕಿರಿಯ ಪ್ರಾಥಮಿಕ ಶಾಲೆ ಸಹ ಶಿಕ್ಷಕಿ ಅಶ್ವಿನಿ ಜಿ.ಕೆ. ಪಾಪಿನಾಯಕನಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಸಹ ಶಿಕ್ಷಕಿ ಶಿಲ್ಪಕಲಾ, ಸೀತಾರಾಮ ತಾಂಡ ಕಂದಾಯ ಗ್ರಾಮ ಮತಗಟ್ಟೆ ಅಧಿಕಾರಿಗಳ ಮೇಲ್ವಿಚಾರಕ ಗ್ರಾಮ ಆಡಳಿತಾಧಿಕಾರಿ ಗಂಗಾಧರ, ಹೊಸಪೇಟೆ ಮತಗಟ್ಟೆ ಅಧಿಕಾರಿಗಳಿಗೆ ಹಾಗೂ ಮೇಲ್ವಿಚಾರಕರಿಗೆ ಪ್ರಶಂಸಾ ಪತ್ರವನ್ನು ನೀಡಿದರು. ಅಪರ ಜಿಲ್ಲಾಧಿಕಾರಿ ಈ.ಬಾಲಕೃಷ್ಣ, ಉಪ ವಿಭಾಗಾಧಿಕಾರಿ ಪಿ. ವಿವೇಕಾನಂದ, ತಹಸೀಲ್ದಾರ್ ಶೃತಿ ಸೇರಿದಂತೆ ಇತರರು ಇದ್ದರು.



ಕಂಪ್ಲಿ ತಾಲ್ಲೂಕಿನ ಸಣಾಪುರ ಗ್ರಾ.ಪಂ.ವ್ಯಾಪ್ತಿಯ ಅರಳಹಳ್ಳಿ ತಾಂಡಾದಲ್ಲಿ ಎಸ್‌ಐಆರ್ ಪ್ರಕ್ರಿಯೆ ನೂರಕ್ಕೆ ನೂರು ಪ್ರಗತಿ ಸಾಧಿಸಿದ ಹಿನ್ನೆಲೆಯಲ್ಲಿ ಮತಗಟ್ಟೆ ಅಧಿಕಾರಿ ಕಟ್ಟೆಮನಿ ಸರಸ್ವತಿ ಅವರನ್ನು ತಾಲ್ಲೂಕು ಆಡಳಿತದಿಂದ ತಹಸಿಲ್ದಾರ್ ಜೂಗಲ್ ಮಂಜುನಾಯಕ ಆತ್ಮೀಯವಾಗಿ ಸನ್ಮಾನಿಸಿದರು. ಅರಳಹಳ್ಳಿ ತಾಂಡದಲ್ಲಿ 683 ಮತದಾರರಿದ್ದು, ಈ ಎಲ್ಲಾ ಮತದಾರರ ಮನೆಗಳಿಗೆ ಎನ್ಯುಮರೇಷನ್ ಅರ್ಜಿಗಳನ್ನು ಸಮರ್ಪಕವಾಗಿ ವಿತರಿಸಿದ್ದಲ್ಲದೆ, ಪುನಃ ಭರ್ತಿ ಮಾಡಿದ ಅರ್ಜಿಗಳನ್ನು ವಾಪಸ್ಸು ಪಡೆದು ಆ ಎಲ್ಲಾ ಅರ್ಜಿಗಳನ್ನು ಆನ್ ಲೈನ್ ಮೂಲಕ ಸಲ್ಲಿಸುವಲ್ಲಿ ಮತಗಟ್ಟೆ ಸಂಖ್ಯೆ 5ದರ ಮತಗಟ್ಟೆ ಅಧಿಕಾರಿ ಕಟ್ಟೆಮನಿ ಸರಸ್ವತಿಯವರು ಯಶಸ್ವಿಯಾಗಿ ಶಿರಸ್ತೆದಾರರಾದ ಜಿ.ಪಂಪಪಾತಿ, ಎಸ್.ಕೆ.ರಮೇಶ್, ಕಂದಾಯಾಧಿಕಾರಿ ವೈ.ಎಂ.ಜಗದೀಶ್, ಚುನಾವಣಾ ವಿಷಯ ನಿರ್ವಾಹಕ ಸುರೇಶ್, ಕಂದಾಯ ಮತ್ತು ತಾ.ಪಂ.ಸಿಬ್ಬಂದಿಗಳು ಹಾಜರಿದ್ದರು.

## ಗ್ಯಾಸ್ ಪೈಪ್ ಅಳವಡಿಸಲು ರಸ್ತೆ ಅಗೆಯುವ ಸಂದರ್ಭ ನೀರಿನ ಪೈಪ್‌ಗೆ ಹಾನಿ

**ಉದಯಕಾಲ ನ್ಯೂಸ್**

**ಹಗರಿಬೊಮ್ಮನಹಳ್ಳಿ:** ಪಟ್ಟಣದ 03ನೇ ವಾರ್ಡಿನ ವಿವೇಕಾನಂದ ನಗರದಲ್ಲಿ 07 ದಿನಗಳ ಹಿಂದೆ ಮನೆ ಮನೆಗೆ ಪಿಎನ್‌ಜಿ ಗ್ಯಾಸ್ ಪೈಪ್ ಲೈನ್ ಅಳವಡಿಸಲು ಬಿಪಿಸಿಎಲ್ ಕಂಪನಿಯಿಂದ ರಸ್ತೆಯನ್ನು ಅ ಗೆಯುವ ಸಂದರ್ಭದಲ್ಲಿ ನೀರಿನ ಪೈಪ್ ಗೆ ಹಾನಿಯಾಗಿದ್ದು ಅದರ ಪರಿಣಾಮವಾಗಿ ಮನೆಗಳಿಗೆ ಸರಬರಾಜು ಆಗಬೇಕಾಗಿದ್ದ ನೀರಿನಲ್ಲಿ ಕಲುಷಿತ ನೀರು ಮಿಶ್ರಣವಾಗಿ ಮನೆಗಳಿಗೆ ತಲುಪಿ ಇಲ್ಲಿನ ನಿವಾಸಿಗಳು ಈ ನೀರನ್ನು ಉಪಯೋಗಿಸುವುದರಿಂದ ಅವರ ಆರೋಗ್ಯದಲ್ಲಿ ಏರುಪೇರು ಆಗಬಹುದು . ಗ್ಯಾಸ್ ಪೈಪ್ ಅಳವಡಿಸಲು ಅಗೆದಿದ್ದ ಗುಂಡಿಯನ್ನು ಮುಚ್ಚಲಾಗಿದೆ ಆದರೆ ಒಡೆದು ಹೋಗಿದ್ದ ನೀರಿನ ಪೈಪನ್ನು ಸರಿಪಡಿಸದೆ ಹಾಗೆ ಬಿಟ್ಟು ಹೋಗಿರುವುದು ಎಷ್ಟು ಸರಿ ಯಾರನ್ನು ದೋಷಿಸುವುದು ಪುರಸಭೆಯವರನ್ನ ಅಥವಾ ಗ್ಯಾಸ್ ಕಂಪನಿ ಅವರನ್ನ ಎಂಬುದು ಇಲ್ಲಿಯ ನಿವಾಸಿಗಳ ಪ್ರಶ್ನೆ?



**ಪುರಸಭೆಯ ನಿರ್ಲಕ್ಷವೇ ಕಾರಣ:** ಈ ಹಿಂದೆ ಇದೇ ವಾರ್ಡಿನಲ್ಲಿ ಗ್ಯಾಸ್ ನ ಪೈಪ್ ಲೈನ್ ಅಳವಡಿಸುವ ಸಂದರ್ಭದಲ್ಲಿ ಪೈಪಿಗೆ ಹಾನಿಯಾಗಿದ್ದು ಅದನ್ನು ಸರಿಪಡಿಸುವುದನ್ನು ಬಿಟ್ಟು ಹಾಗೆ ಗುಂಡಿ ಮುಚ್ಚಿ ಹೋಗಿರುತ್ತಾರೆ ಆ ಸಂದರ್ಭದಲ್ಲಿ ಹೊಡೆದು ಹೋದ ಪೈಪ್ನ ಮುಖಾಂತರ ಮಣ್ಣು ಮಿಶ್ರಿತ ನೀರು ಮನೆಗಳ ನೀರಿನ ಟ್ಯಾಂಕಿಗೆ ಮಿಶ್ರಣವಾಗಿ ನೀರಿನ ಟ್ಯಾಂಕ್ ತುಂಬಾ ಮಣ್ಣು ಮಿಶ್ರಣ ವಾಗಿರುತ್ತದೆ ಇದರ ಪರಿಣಾಮವಾಗಿ ನೀರಿನ ಟ್ಯಾಂಕನ್ನು ಸ್ವಚ್ಛಗೊಳಿಸಲು ಇಲ್ಲಿನ ನಿವಾಸಿಗಳು ಪರದಾಡುವಂತೆ ಆಯ್ತು ಕೊನೆಗೆ ಪುರಸಭೆಯ ಅಧಿಕಾರಿಗಳ ಗಮನಕ್ಕೆ ಬಂದಾಗ ಅಧಿಕಾರಿಗಳು ಬಂದು ಒಡೆದು ಹೋಗಿದ ಪೈಪನ್ನು ಸರಿಪಡಿಸಿ ಹೋಗಿದ್ದರು ಈಗ ಮತ್ತೊಮ್ಮೆ ಅದೇ ರೀತಿಯ ಘಟನೆ ನಡೆದಿದ್ದು 07 ದಿನ ಕಳೆದರೂ ಪುರಸಭೆಯವರು ಇತ್ತ ಕಡೆ ಮುಖ ಮಾಡಿಲ್ಲ ಇದು ಪುರಸಭೆಯ ನಿರ್ಲಕ್ಷವೊ ಅಥವಾ ಗ್ಯಾಸ್ ಕಂಪನಿಯವರ ನಿರ್ಲಕ್ಷವೊ ಎಂಬುದು ಸ್ಥಳೀಯ ನಿವಾಸಿಗಳಿಗೆ ಗೊಂದಲದ ಗೂಡಾಗಿದೆ.

## ಎಸ್‌ಐಆರ್ ಕಾರ್ಯ ಸೂಕ್ತವಾಗಿ ಮಾಡಿ: ಜೂಗಲ್ ಮಂಜುನಾಯಕ

**ಉದಯಕಾಲ ನ್ಯೂಸ್**

**ಕಂಪ್ಲಿ:** ಚುನಾವಣಾ ಆಯೋಗ ನಡೆಸುತ್ತಿರುವ ಮತದಾರರ ವಿಶೇಷ ಸಮಗ್ರ ಪರಿಶೀಲನೆ ಕಾರ್ಯಕ್ರಮವು ಅತ್ಯಂತ ಮಹತ್ವದ್ದಾಗಿದ್ದು, ಕಂಪ್ಲಿ ಪಟ್ಟಣಸೇರಿದಂತೆ ತಾಲೂಕಿನಲ್ಲಿ ಮತಗಟ್ಟೆ ಅಧಿಕಾರಿಗಳ ಕಾರ್ಯ ನಿರಂತರವಾಗಿ ಪರಿಶೀಲನೆ ಮಾಡಲಾಗುತ್ತಿದೆ ಎಂದು ತಹಸಿಲ್ದಾರರು ಹಾಗೂ ತಾಲ್ಲೂಕಿನ ಸಹಾಯಕ ಮತದಾರರ ನೋಂದಣಾಧಿಕಾರಿ ಜೂಗಲ್ ಮಂಜುನಾಯಕ ತಿಳಿಸಿದರು.

ಪಟ್ಟಣದ ತೆಗ್ಗಿನ ಮಠ ಪ್ರದೇಶದಲ್ಲಿ, ಕೋಟೆ ಪ್ರದೇಶ ಹಾಗೂ ಇತರೆ ಪ್ರದೇಶಗಳಲ್ಲಿ ಮತಗಟ್ಟೆ ಅಧಿಕಾರಿಗಳು ಮನೆ, ಮನೆಗೆ ತೆರಳಿ ಗಣತಿ ನಮೂನೆಗಳನ್ನು ಕೊಡುತ್ತಿರುವುದನ್ನು ಪರಿಶೀಲಿಸಿ ಮಾತನಾಡಿದರು.

ಬಿಎಲ್ಒಗಳು ಮನೆ ಮನೆಗೆ ತೆರಳಿ ಗಣತಿ ನಮೂನೆಗಳನ್ನು ವಿತರಿಸುತ್ತಿರುವುದನ್ನು ಖಾತ್ರಿ ಪಡಿಸಿಕೊಳ್ಳುತ್ತಿದ್ದೇನೆ. ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆಗಾಗಿ ಬಿಎಲ್ ಒಗಳು ಮನೆ ಮನೆಗೆ ತೆರಳಿ ಗಣತಿ ನಮೂನೆ ಕೊಡುತ್ತಿದ್ದಾರೆ. ನೆಟ್ ವರ್ಕ ಸರ್ವರ್ ತೊಂದರೆ ಮೊದಲಾದ ಸಮಸ್ಯೆಗಳನ್ನು ಗಮನಿಸಲಾಗಿದೆ ಎಂದರು. ಈಗಾಗಲೇ ಮ್ಯಾಪಿಂಗ್ ಆಗಿದ್ದು, ಗಣತಿ ನಮೂನೆ ವಿತರಿಸಿ ಡಿಜಿಟಲೈಜೇಷನ್ ಮಾಡಲಾಗುತ್ತಿದೆ. ಮತಗಟ್ಟೆ

ಅಧಿಕಾರಿಗಳ ಕಾರ್ಯವೈಖರಿ ಪರಿಶೀಲಿಸಲಾಗುತ್ತಿದೆ. ಎಸ್ ಐ ಆರ್ ಪ್ರಕ್ರಿಯೆಯನ್ನು ಯಾವ ಲೋಪದೋಷಗಳು ಇಲ್ಲದಂತೆ ಸುಸೂತ್ರವಾಗಿ ನೆರವೇರಿಸಲು ಸೂಕ್ತ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದರು.



ಜಿಲ್ಲಾಧಿಕಾರಿ ಕಚೇರಿ ಚುನಾವಣಾ ವಿಷಯ ನಿರ್ವಾಹಕ ಎ.ನಿರಂಜನಮೂರ್ತಿ, ಬಿಎಲ್ ಒ ಗಂಗಮ್ಮ ದ್ವಿತೀಯ ದರ್ಜೆ ಸಹಾಯಕ ಸುರೇಶ್, ಗ್ರಾಮಾಡಳಿತಾಧಿಕಾರಿ ವಮ್ಮಾರಿ ರಮೇಶ್ ಸೇರಿದಂತೆ ಇತರರು ಇದ್ದರು.

## ಗೆಣಿಕೆಹಾಳು ಗ್ರಾಮದಲ್ಲಿ ಬಳ್ಳಾರಿಯ ಜನಪದ ಕಲೆಗಳ ಉಪನ್ಯಾಸ ಜಾನಪದ ಹಾಡು, ಕಲೆ ಉಳಿವಿಗೆ ಶ್ರಮಿಸೋಣ: ಡಾ. ಚಿಲ್ಮರಾಗಿ




**ಉದಯಕಾಲ ನ್ಯೂಸ್**

**ಕುರುಗೋಡು:** ಗ್ರಾಮೀಣ ಪ್ರದೇಶಗಳಲ್ಲಿ ಅಡಗಿರುವ ಜಾನಪದ ಸಾಹಿತ್ಯ, ಕಲೆ, ಸಂಸ್ಕೃತಿ ಮತ್ತು ಪರಂಪರೆ ಉಳಿವಿಗೆ ನಾವು-ನೀವೆಲ್ಲರೂ ಶ್ರಮಿಸೋಣ ಎಂದು ಕರ್ನಾಟಕ ಸಾಹಿತ್ಯ ಅಕಾಡೆಮಿ ಸದಸ್ಯ ಡಾ. ಸಿ.ಬಿ. ಚಿಲ್ಮರಾಗಿ ಅಭಿಮತ ವ್ಯಕ್ತಪಡಿಸಿದರು.

ಸಮೀಪದ ಗೆಣಿಕೆಹಾಳು ಸರ್ಕಾರಿ ಫ್ರೌಢಶಾಲೆ ಆವರಣದಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು, ಸರ್ಕಾರಿಪೌಢಶಾಲೆ ಗೆಣಿಕೆಹಾಳು, ಮತ್ತು ಚಕೋರ ಸಾಹಿತ್ಯ ವಿಚಾರ ವೇದಿಕೆ ಬಳ್ಳಾರಿ ಇವರ ಸಂಯುಕ್ತಾಶ್ರಯದಲ್ಲಿ ಬಳ್ಳಾರಿಜಿಲ್ಲೆಯ ಜನಪದ ಕಲೆಗಳು ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ವಿದ್ಯಾರ್ಥಿಗಳಲ್ಲಿ ಸಾಹಿತ್ಯದ ಮೂಲಕ ವೈಚಾರಿಕೆ ಪ್ರಜ್ಞೆಯನ್ನು ಬೆಳೆಸುವುದು ಚಕೋರ ವೇದಿಕೆಯ ಉದ್ದೇಶ ಎಂದು ನುಡಿದರು.

ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ ಸ್ನಾತಕೋತ್ತರ ಕೇಂದ್ರ ನಂದಿಹಳ್ಳಿಯ ಕೆಎನ್.ರೇಣುಕಾಪೂಜಾರ್ ಅವರು ವಿಶೇಷ ಉಪನ್ಯಾಸ ನೀಡಿ ಮಾತನಾಡಿದ ಅವರು, ಜಾನಪದ ಕಲೆಗಳ ಉಪನ್ಯಾಸಕಾರ್ಯಕ್ರಮಗಳು ಹಳ್ಳಿಯ ವಿದ್ಯಾರ್ಥಿಗಳಿಗೆ ಸಾಹಿತ್ಯದ ಅಭಿರುಚಿಯನ್ನು ಬೆಳೆಸಲು ಇಂತಹ ಕಾರ್ಯಕ್ರಮಗಳು ಸಹಾಯಕವಾಗಿವೆ ಎಂದು ನೆರೆದ ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಗೆಣಿಕೆಹಾಳು ಸರ್ಕಾರಿ ಪೌಢಶಾಲೆಯ ಮುಖ್ಯಗುರು ಹೆಚ್. ಹುಷೇನ್‌ಭಾಷ ಅವರು ಜಾನಪದ ಕಲೆಗಳ ಕುರಿತು ಮಾತನಾಡಿ ಬಯಲಾಟ, ದೊಡ್ಡಾಟ, ಹಗಲುವೇಶಕುಣಿತ, ತೊಗಲುಗೊಂಬೆಯಾಟ, ಜ್ಯೋಗುತಿನೃತ್ಯ, ಚೌಡಿಕೆಪದ ಸೇರಿದಂತೆ ಇತರೆ ಮೊದಲಾದ ಜಾನಪದ ಕಲೆಗಳ ತವರೂರು ಎಂದು ನುಡಿದರು. ಆದ್ದರಿಂದ ಜನಪದ ಕಲೆಗಳನ್ನು ಉಳಿಸಿ, ಬೆಳೆಸಬೇಕೆಂದು ವಿದ್ಯಾರ್ಥಿಗಳಿಗೆ ಕರೆನೀಡಿದರು.

ಚಕೋರಸಾಹಿತ್ಯ ವಿಚಾರ ವೇದಿಕೆಯ ಜಿಲ್ಲಾ ಸಂಚಾಲಕ ಡಾ.ತಿಪ್ಪೇರುದ್ರಸಂಡೂರು ಅವರು ಪ್ರಸ್ತಾವಿಕವಾಗಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಎಸ್‌ಡಿಎಂಸಿ ಅದ್ಯಕ್ಷ ರುದ್ರಪ್ಪ, ಕುರುಗೋಡು ಕ.ಸಾ.ಪರಿಷತ್ ಅಧ್ಯಕ್ಷ ಮಸೂತಿನಾಗರಾಜ, ಅದ್ಯಾಪಕರಾದ ವಿಜಯಕುಮಾರಿ, ಪುಷ್ಪಾಂಜಲಿ, ದೊಡ್ಡನಗೌಡ, ಸುಭಾನ್, ಆಜಾದ್, ಶಮೀಮ್, ಸುಷ್ಮಾ, ಸೇರಿದಂತೆ ಶಾಲೆಯ ವಿದ್ಯಾರ್ಥಿಗಳು ಭಾಗವಹಿಸಿದ್ದರು.

सेन्ट्रल बैंक ऑफ़ इंडिया
Central Bank of India
CENTRAL TO YOU SINCE 1911

ಪ್ರಾದೇಶಿಕ ಕಚೇರಿ: 14/15, ವೆರೈಟಿ ಹಾಲ್ ರಸ್ತೆ, ಕೊಯಮತ್ತೂರು – 641 001

**ಮೆಗಾ ಇ–ಹರಾಜು ಮಾರಾಟದ ಸೂಚನೆ**

(ಸರ್ಫೇಸಿ ಕಾಯ್ದೆ 2002 ರ ಅಡಿಯಲ್ಲಿ)

ಕೆಳಗೆ ಉಲ್ಲೇಖಿಸಲಾದ ದಿನಾಂಕದಂದು, 2002 ರ ಹಣಕಾಸು ಆಸ್ತಿಗಳ ಸೆಕ್ಯೂರಿಟೈಸೇಶನ್ ಮತ್ತು ಪುನರ್ನಿರ್ಮಾಣ ಮತ್ತು ಭದ್ರತಾ ಹಿತಾಸಕ್ತಿ ಜಾರಿ ಕಾಯ್ದೆಯ ಸೆಕ್ಷನ್ 13(4) ರ ಅಡಿಯಲ್ಲಿ, ಸದರಿ ಕಾಯ್ದೆಯ ಸೆಕ್ಷನ್ 13(2) ರ ಅಡಿಯಲ್ಲಿ ನೀಡಲಾದ ಡಿಮ್ಯಾಂಡ್ ನೋಟಿಸ್ಗೆ ಅನುಗುಣವಾಗಿ, ಕೆಳಗೆ ಉಲ್ಲೇಖಿಸಲಾದ ದಿನಾಂಕದಂದು, ಬ್ಯಾಂಕಿನ ಬಾಕಿಗಳನ್ನು ವಸೂಲಿ ಮಾಡಲು ಮತ್ತು ಬಡ್ಡಿಯನ್ನು ವಸೂಲಿ ಮಾಡಲು ಹಕ್ಕನ್ನು ಹೊಂದಿರುವ ಕೆಳಗಿನ ಸಾಲ ಖಾತೆಗಳಲ್ಲಿ, ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾದ ಅಧಿಕೃತ ಅಧಿಕಾರಿಯು ಈ ಕೆಳಗಿನ ಅನುಸೂಚಿಯಲ್ಲಿ ಉಲ್ಲೇಖಿಸಲಾದ ಆಸ್ತಿಗಳನ್ನು ಸ್ವಾಧೀನಪಡಿಸಿಕೊಂಡಿರುವುದರಿಂದ ಮತ್ತು ಸಾಲಗಾರ/ಖಾತರಿದಾರ/ಅಡಮಾನದಾರರು ಬಾಕಿಗಳನ್ನು ಮರುಪಾವತಿಸಲು ವಿಫಲವಾದ ಪರಿಣಾಮವಾಗಿ, 2002 ರ ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳ ನಿಯಮ 8 ಮತ್ತು 9 ರೊಂದಿಗೆ ಓದಲಾದ ಸದರಿ ಕಾಯ್ದೆಯ ಸೆಕ್ಷನ್ 13(4) (ಎ) ಅಡಿಯಲ್ಲಿ ನೀಡಲಾದ ಅಧಿಕಾರವನ್ನು ಚಲಾಯಿಸಿ, ಸದರಿ ಆಸ್ತಿಗಳ ಮಾರಾಟದ ಮೂಲಕ ಬ್ಯಾಂಕಿನ ಬಾಕಿಗಳನ್ನು ವಸೂಲಿ ಮಾಡಲು ಪ್ರಸ್ತಾಪಿಸಲಾಗಿದೆ. ವೆಬ್ಸೈಟ್ನಲ್ಲಿ ಒದಗಿಸಲಾದ ಇ–ಹರಾಜು ವೇದಿಕೆಯ ಮೂಲಕ ಕೆಳಗೆ ಸಹಿ ಮಾಡಿದವರು ಮಾರಾಟವನ್ನು ಮಾಡುತ್ತಾರೆ: **https://baanknet.com**

**ಶಾಖೆ: ಹೊಸೂರು ಶಾಖೆ. ಸಾಲದ ಖಾತೆಯ ಹೆಸರು: ಸಾಲಗಾರ: M/s. ಲಲಿತ್ ಶಾಂತ್ ಆಟೋ ಕಾಂಪೊನೆಂಟ್ಸ್, ಮಾಲೀಕರು: ಶ್ರೀಮತಿ ಲಲಿತಾ ಶಾಂತೇಶ್ ಉಕ್ಕಲಿ. ನೋಂದಣಿ ಮತ್ತು ಕಾರ್ಖಾನೆ ವಿಳಾಸ:** ಖಾತಾ ಸಂಖ್ಯೆ 1 & 2, ಸೈ ಸಂಖ್ಯೆ 650/ಬಿ, ಕೊತಗೊಂಡಪ್ಪಲಿ ಗ್ರಾಮ, ಹೊಸೂರು–635109. **ಮಾಲೀಕರ ವಾಸದ ವಿಳಾಸ: ಶ್ರೀಮತಿ ಲಲಿತಾಂಬಿಕಾ ಶಾಂತೇಶ್ ಉಕ್ಕಲಿ ಅಲಿಯಾಸ್ ಶ್ರೀಮತಿ ಲಲಿತಾ ಶಾಂತೇಶ್ ಉಕ್ಕಲಿ ಮತ್ತು ಶ್ರೀ ಶಾಂತೇಶ್ ರಾಮಚಂದ್ರ ಉಕ್ಕಲಿ,** ಆರ್.ಎಚ್. ನಂ. ಎಫ್–1, ದಶಮೇಶ್ ವಿಹಾರ್ ಕೋ–ಆಪರೇಟಿವ್ ಹೌಸಿಂಗ್ ಸೊಸೈಟಿ, ಶಹನೂರ್ಮಿಯಾ ದರ್ಗಾ, ಶಹನೂರ್ವಾಡಿ, ಔರಂಗಾಬಾದ್, ಮಹಾರಾಷ್ಟ್ರ–431001. **ಬಾಕಿ ಮೊತ್ತ:** 09.07.2026 **ರಂತೆ ರೂ.**4,59,24,771.00 ಮತ್ತು ಬಡ್ಡಿ ಮತ್ತು ಇತರ ಶುಲ್ಕಗಳು. **ಡಿಮ್ಯಾಂಡ್ ನೋಟಿಸ್ ದಿನಾಂಕ:** 01.10.2021. **ಭೌತಿಕ ಸ್ವಾಧೀನವನ್ನು ತೆಗೆದುಕೊಳ್ಳಲಾಗಿದೆ:** 16.02.2022. ಸ್ಥಿರ ಆಸ್ತಿಯ ವಿವರಣೆ (1) ಆರ್.ಎಸ್. ಸಂಖ್ಯೆ 71/A+ 72A, ಕೃಷಿಯೇತರ ವಸತಿ ಪ್ಲಾಟ್ ಸಂಖ್ಯೆ. 02, 2 ಗುಂಟೆ 6 ಅಣ್ಣಾಗಳು, ಅತ್ತಿಕೋಳ ಗ್ರಾಮ, ಹನುಮಂತ ನಗರ ಹತ್ತಿರ, ಅತ್ತಿಕೋಳ, ಧಾರವಾಡ ತಾಲ್ಲೂಕು ಮತ್ತು ಜಿಲ್ಲೆ ಊಆಡಅ ಮಿತಿಯಲ್ಲಿದೆ. ಆಸ್ತಿಯ ಗಡಿಗಳು: ಪೂರ್ವ: ಪ್ಲಾಟ್ ಸಂಖ್ಯೆ. 3, ಪಶ್ಚಿಮ: ಪ್ಲಾಟ್ ಸಂಖ್ಯೆ. 1, ಉತ್ತರ: ರಸ್ತೆ, ದಕ್ಷಿಣ: ಪ್ಲಾಟ್ ಸಂಖ್ಯೆ. 15. **ಮೀಸಲು ಬೆಲೆ: ರೂ.** 65,95,000/–.**EMD: ರೂ.** 6,59,500/–. **ಬಿಡ್ ಹೆಚ್ಚಳ ಮೊತ್ತ: ರೂ.** 1,00,000/–.

(2): ಆರ್.ಎಸ್. ಸಂಖ್ಯೆ. 71/ಎ+ 72ಎ, ಕೃಷಿಯೇತರ ವಸತಿ ಪ್ಲಾಟ್ ಸಂಖ್ಯೆ. 245, 1 ಗುಂಟಾ 5.25 ಅಣ್ಣಾಗಳು, ಅತ್ತಿಕೋಳ ಗ್ರಾಮ, ಹನುಮಂತ ನಗರ ಹತ್ತಿರ, ಅತ್ತಿಕೋಳ, ಧಾರವಾಡ ತಾಲ್ಲೂಕು ಮತ್ತು ಜಿಲ್ಲೆ HDMC ಮಿತಿಯಲ್ಲಿದೆ. ಆಸ್ತಿಯ ಗಡಿಗಳು: ಪೂರ್ವ: ರಸ್ತೆ, ಪಶ್ಚಿಮ: ಪ್ಲಾಟ್ ಸಂಖ್ಯೆ. 234, ಉತ್ತರ: ಪ್ಲಾಟ್ ಸಂಖ್ಯೆ. 246, ದಕ್ಷಿಣ: ಪ್ಲಾಟ್ ಸಂಖ್ಯೆ. 244. **ಮೀಸಲು ಬೆಲೆ: ರೂ.36,88,000/–. ಇಎಂಡಿ ರೂ.3,68,800/–. ಬಿಡ್ ಹೆಚ್ಚಳ ಮೊತ್ತ: ರೂ.1,00,000/–.**

(3): ಆರ್.ಎಸ್. ಸಂಖ್ಯೆ. 71/ಎ+ 72ಎ, ಕೃಷಿಯೇತರ ವಸತಿ ಪ್ಲಾಟ್ ಸಂಖ್ಯೆ. 246, 1 ಗುಂಟಾ 5.25 ಅಣ್ಣಾಸ್, ಅತ್ತಿಕೋಳ ಗ್ರಾಮ, ಹನುಮಂತ ನಗರ ಹತ್ತಿರ, ಅತ್ತಿಕೋಳ, ಧಾರವಾಡ ತಾಲ್ಲೂಕು ಮತ್ತು ಜಿಲ್ಲೆ HDMC ಮಿತಿಯಲ್ಲಿದೆ. ಆಸ್ತಿಯ ಗಡಿಗಳು: ಪೂರ್ವ: ರಸ್ತೆ, ಪಶ್ಚಿಮ: ಪ್ಲಾಟ್ ಸಂಖ್ಯೆ. 233, ಉತ್ತರ: ಪ್ಲಾಟ್ ಸಂಖ್ಯೆ. 247, ದಕ್ಷಿಣ: ಪ್ಲಾಟ್ ಸಂಖ್ಯೆ. 245. **ಮೀಸಲು ಬೆಲೆ: ರೂ.36,88,000/–. ಇಎಂಡಿ ರೂ.3,68,800/–. ಬಿಡ್ ಹೆಚ್ಚಳ ಮೊತ್ತ: ರೂ.1,00,000/–**

(4) ಆರ್.ಎಸ್. ಸಂಖ್ಯೆ. 71/ಎ+ 72ಎ, ಕೃಷಿಯೇತರ ವಸತಿ ಪ್ಲಾಟ್ ಸಂಖ್ಯೆ. 252, 1 ಗುಂಟಾ 5.25 ಅಣ್ಣಾಗಳು, ಅತ್ತಿಕೋಳ ಗ್ರಾಮ, ಹನುಮಂತ ನಗರ ಹತ್ತಿರ, ಅತ್ತಿಕೋಳ, ಧಾರವಾಡ ತಾಲ್ಲೂಕು ಮತ್ತು ಜಿಲ್ಲೆ HDMC ಮಿತಿಯಲ್ಲಿದೆ. ಆಸ್ತಿಯ ಗಡಿಗಳು: ಪೂರ್ವ: ರಸ್ತೆ, ಪಶ್ಚಿಮ: ಪ್ಲಾಟ್ ಸಂಖ್ಯೆ. 227, ಉತ್ತರ: ಪ್ಲಾಟ್ ಸಂಖ್ಯೆ. 253, ದಕ್ಷಿಣ: ಪ್ಲಾಟ್ ಸಂಖ್ಯೆ. 251. **ಮೀಸಲು ಬೆಲೆ: ರೂ.36,88,000/–. ಇಎಂಡಿ: ರೂ.3,68,800/–. ಬಿಡ್ ಹೆಚ್ಚಳ ಮೊತ್ತ: ರೂ.1,00,000/–.**

(5): ಆರ್.ಎಸ್. ಸಂಖ್ಯೆ. 71/ಎ+ 72ಎ, ಕೃಷಿಯೇತರ ವಸತಿ ಪ್ಲಾಟ್ ಸಂಖ್ಯೆ. 253, 1 ಗುಂಟಾ 12.5 ಅಣ್ಣಾಸ್, ಅತ್ತಿಕೋಳ ಗ್ರಾಮ, ಹನುಮಂತ ನಗರ ಹತ್ತಿರ, ಅತ್ತಿಕೋಳ, ಧಾರವಾಡ ತಾಲ್ಲೂಕು ಮತ್ತು ಜಿಲ್ಲೆ HDMC ಮಿತಿಯಲ್ಲಿದೆ. ಆಸ್ತಿಯ ಗಡಿಗಳು: ಪೂರ್ವ: ರಸ್ತೆ, ಪಶ್ಚಿಮ: ಪ್ಲಾಟ್ ಸಂಖ್ಯೆ. 226, ಉತ್ತರ ರಸ್ತೆ, ದಕ್ಷಿಣ: ಪ್ಲಾಟ್ ಸಂಖ್ಯೆ. 252. **ಮೀಸಲು ಬೆಲೆ: ರೂ.49,46,000/–.ಇಎಂಡಿ: ರೂ.4,94,600/–. ಬಿಡ್ ಹೆಚ್ಚಳ ಮೊತ್ತ: ರೂ.1,00,000/–.**

**ಹರಾಜು ದಿನಾಂಕ:** 28.07.2026. **ಹರಾಜಿನ ಸಮಯ: ಬೆಳಿಗ್ಗೆ** 11.00 **ರಿಂದ ಸಂಜೆ** 4.00 **ರವರೆಗೆ,** 10 **ನಿಮಿಷಗಳ ಸ್ವಯಂ ವಿಸ್ತರಣೆಯೊಂದಿಗೆ. ಆಸ್ತಿಯ ಪರಿಶೀಲನೆ ದಿನಾಂಕ:** 20.07.2026 **ಮತ್ತು** 24.07.2026 **ರ ನಡುವಿನ ಎಲ್ಲಾ ಕೆಲಸದ ದಿನಗಳಲ್ಲಿ ಬೆಳಿಗ್ಗೆ** 10 **ರಿಂದ ಸಂಜೆ** 4 **ರವರೆಗೆ ಶಾಖಾ ವ್ಯವಸ್ಥಾಪಕರ ಪೂರ್ವ ನೇಮಕಾತಿಯೊಂದಿಗೆ. ಇಎಂಡಿ ಪಾವತಿಸಲು ಕೊನೆಯ ದಿನಾಂಕ:** 28.07.2026 **ರಂದು ಮಧ್ಯಾಹ್ನ** 1.00 **ರವರೆಗೆ. ಅಧಿಕೃತ ಅಧಿಕಾರಿ–ಮೊಬೈಲ್ ಸಂಖ್ಯೆ:** 8489903009/**ಮುಖ್ಯ ವ್ಯವಸ್ಥಾಪಕರು (RO) – ಮೊಬೈಲ್ ಸಂಖ್ಯೆ:** 8489903057

**ನಿಯಮಗಳು ಮತ್ತು ಷರತ್ತುಗಳು:** 1. ಹರಾಜು ಮಾರಾಟವು https://baanknet.com ವೆಬ್ಸೈಟ್ ಮೂಲಕ ಮೇಲೆ ನಿರ್ದಿಷ್ಟಪಡಿಸಿದ ದಿನಾಂಕ ಮತ್ತು ಸಮಯದವರೆಗೆ (ಮಾರಾಟ ಮುಗಿಯುವವರೆಗೆ 10 ನಿಮಿಷಗಳ ಅನಿಯಮಿತ ಸ್ವಯಂ ವಿಸ್ತರಣೆಯೊಂದಿಗೆ) ಆನ್ಲೈನ್ನಲ್ಲಿ ಇ–ಹರಾಜು/ಬಿಡ್ಡಿಂಗ್ ಆಗಿರುತ್ತದೆ. 2. ಬಿಡ್ಗಳನ್ನು 28.07.2026 ರಂದು ಅಥವಾ ಅದಕ್ಕೂ ಮೊದಲು ಮಧ್ಯಾಹ್ನ 1.00 ಗಂಟೆಯವರೆಗೆ ಆನ್ಲೈನ್ನಲ್ಲಿ ಸಲ್ಲಿಸಬೇಕು. 3. ಇ–ಹರಾಜನ್ನು "ಎಲ್ಲಿ ಇದೆಯೋ ಅಲ್ಲಿ" ನಡೆಸಲಾಗುತ್ತದೆ. 4. ಉದ್ದೇಶಿತ ಬಿಡ್ದಾರರು ತಮ್ಮ ಬಿಡ್ಗಳನ್ನು ಸಲ್ಲಿಸುವ ಮೊದಲು ಮತ್ತು ಇ–ಹರಾಜು ಮಾರಾಟ ಪ್ರಕ್ರಿಯೆಯಲ್ಲಿ ಭಾಗವಹಿಸುವ ಮೊದಲು ಹರಾಜು ಮಾರಾಟದ ವಿವರವಾದ ನಿಯಮಗಳು ಮತ್ತು ಷರತ್ತುಗಳಿಗಾಗಿ **https://baanknet.com** ವೆಬ್ಸೈಟ್ ಅನ್ನು ಪರಿಶೀಲಿಸಬೇಕಾಗುತ್ತದೆ. 5. ಯಶಸ್ವಿ ಬಿಡ್ದಾರರು/ಖರೀದಿದಾರರು 1961 ರ ಆದಾಯ ತೆರಿಗೆ ಕಾಯ್ದೆಯ ಸೆಕ್ಷನ್ 194 IA ಪ್ರಕಾರ, ರೂ. 50.00 ಲಕ್ಷ ಮತ್ತು ಅದಕ್ಕಿಂತ ಹೆಚ್ಚಿನ ಮೌಲ್ಯದ ಸ್ಥಿರಾಸ್ತಿ/ಆಸ್ತಿಗಳ ಮೇಲಿನ ಮಾರಾಟದ ಆದಾಯದ ಮೇಲೆ 1% ರಷ್ಟು ಟಿಡಿಎಸ್ ಅನ್ನು ಪಾವತಿಸಬೇಕು ಮತ್ತು ಫಾರ್ಮ್ 26QB ನಲ್ಲಿ ಚಲನ್ ಅನ್ನು ಒದಗಿಸುವ ಮೂಲಕ ಮತ್ತು ಟಿಡಿಎಸ್ ಪ್ರಮಾಣಪತ್ರದ ಮೂಲ ರಶೀದಿಯನ್ನು ಬ್ಯಾಂಕಿಗೆ ಸಲ್ಲಿಸುವ ಮೂಲಕ ಅದನ್ನು ಠೇವಣಿ ಮಾಡಬೇಕು. 6. ಆಸ್ತಿಗೆ ಸಂಬಂಧಿಸಿದ ಯಾವುದೇ ವಿಚಾರಣೆಗೆ **ಅಧಿಕೃತ ಅಧಿಕಾರಿ–ಮೊಬೈಲ್ ಸಂಖ್ಯೆ:** 8489903009/**ಮುಖ್ಯ ವ್ಯವಸ್ಥಾಪಕರು (RO) ಮೊಬೈಲ್ ಸಂಖ್ಯೆ:** 8489903057, **ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ, ಪ್ರಾದೇಶಿಕ ಕಚೇರಿ, ಕೊಯಮತ್ತೂರು, ಇ–ಮೇಲ್ ಐಡಿಗಳು: bmcoim2071@centralbank.co.in/recvcoimro@centralbank.co.in** ಅವರನ್ನು ಕೆಲಸದ ದಿನಗಳಲ್ಲಿ ಕಚೇರಿ ಸಮಯದಲ್ಲಿ ಮತ್ತು ವೆಬ್ ಪೋರ್ಟಲ್ನಲ್ಲಿ ಬಿಡ್ದಾರರು ನೋಂದಾಯಿಸಿದ ನಂತರ ಸಂಪರ್ಕಿಸಬಹುದು. ಉದ್ದೇಶಿತ ಬಿಡ್ದಾರರು/ಖರೀದಿದಾರರು ಬಿಡ್ ಸಲ್ಲಿಸುವ ಕೊನೆಯ ದಿನಾಂಕದ ಮೊದಲು ವೆಬ್ ಪೋರ್ಟಲ್ನಲ್ಲಿ ಅಪ್ಲೋಡ್ ಮಾಡಿದ ಕೆಳಗಿನ ದಾಖಲೆಗಳ ಪ್ರತಿಗಳನ್ನು ಪಡೆಯಬೇಕಾಗುತ್ತದೆ. ಅಂದರೆ 1) NEFT/RTGS ಚಲನ್ ಪ್ರತಿ, 2) PAN ಕಾರ್ಡ್ ಪ್ರತಿ, 3) ಗುರುತಿನ ಚೀಟಿ (KYC) ಅಂದರೆ ಮತದಾರರ ಗುರುತಿನ ಚೀಟಿ/ಚಾಲನಾ ಪರವಾನಗಿ/ಪಾಸ್ಪೋರ್ಟ್ ಇತ್ಯಾದಿಗಳ ಸ್ವಯಂ ದೃಢೀಕೃತ ಪ್ರತಿ, 4) ವಿಳಾಸದ ಪುರಾವೆಯ ಪ್ರತಿ, ಅದು ಇಲ್ಲದೆ ಬಿಡ್ ತಿರಸ್ಕರಿಸಲ್ಪಡಬಹುದು.

**ದಿನಾಂಕ:** 09.07.2026.
**ಸ್ಥಳ: ಹೊಸೂರು.**

**ಅಧಿಕೃತ ಅಧಿಕಾರಿ**
**ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ**